**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ.2/2019**

ಅ.ಸಾ : 1
ದೋಸಾ : 1

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿದ್ದಲಿಂಗಪ್ಪ ಪೂಜಾರ |
| ತಂದೆಯ ಹೆಸರು | : | ನಾಗಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ವರ್ದಿ ಗ್ರಾಮ, ಹಾನಗಲ್ಲ ತಾ. |

ದಿನಾಂಕ:**21/06/2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದ: –**

1. ನಮ್ಮ ಕುಟುಂಬಕ್ಕೆ ಸೇರಿದ ಪಿತಾರ್ಜಿತ ಆಸ್ತಿ ಸರ್ವೆ ನಂ-128/1 ವರ್ದಿ ಗ್ರಾಮದಲ್ಲಿ ಇರುತ್ತದೆ. ನಮ್ಮ ಅಜ್ಜ ತೀರಿಹೋಗಿದ್ದು, ಅವರ ಹೆಸರಿನಲ್ಲಿದ್ದ ಜಮೀನನ್ನು ವಾರಸುದಾರರ ಖಾತೆಗೆ ವರ್ಗಾವಣೆ ಮಾಡಲು ನಾಡಕಛೇರಿ ಬಮ್ಮನಹಳ್ಳಿಗೆ ದಿನಾಂಕ: 13/11/2017 ರಂದು ಅರ್ಜಿಯನ್ನು ಕೊಟ್ಟಿದ್ದೆ. ಭೂಮಾಪಕರು ಜಮೀನನ್ನು ಅಳತೆ ಮಾಡಲು ಬರಬೇಕಿತ್ತು. ಆಗ ಆರೋಪಿ ಸರಕಾರಿ ಭೂಮಾಪಕರಾಗಿ ಕೆಲಸ ಮಾಡುತ್ತಿದ್ದರು.

2. 2-3 ತಿಂಗಳು ಕಳೆದ ನಂತರ ಆರೋಪಿ ನಮ್ಮ ಜಮೀನಿಗೆ ಅಳತೆ ಮಾಡಲು ಬಂದಿದ್ದರು. ಬಂದು ಅಳತೆ ಮಾಡಿಕೊಂಡು ಹೋಗಿರುತ್ತಾರೆ. ಆರೋಪಿ ಜಮೀನನ್ನು ಪೋಡಿ ಮಾಡಿಕೊಡದೇ 3-4 ತಿಂಗಳು ಕಾಲ ಸತಾಯಿಸಿರುತ್ತಾರೆ. ಆರೋಪಿ ರೂ.5,000/- ಲಂಚದ ಹಣ ಕೊಟ್ಟರೆ ಜಮೀನನ್ನು ಪೋಡಿ ಮಾಡಿಕೊಡುತ್ತೇನೆ ಅಂತಾ ಕೇಳಿದರು. ನಾನು ರೈತನಿದ್ದು ಆರೋಪಿ ಕೇಳಿದ ಲಂಚದ ಹಣವನ್ನು ಕೊಡಲು ಆಗುವುದಿಲ್ಲ ಅಂತಾ ಹೇಳಿದೆ.

3. ನಾನು ಹತ್ತಾರು ಬಾರಿ ಆರೋಪಿಯ ಕಛೇರಿಗೆ ಭೇಟಿಕೊಟ್ಟು ಜಮೀನನ್ನು ಪೋಡಿ ಮಾಡಿಕೊಡಲು ಮನವಿ ಮಾಡಿದೆ. ದಿನಾಂಕ:02/06/2018 ರಂದು ಆರೋಪಿಗೆ ಪೋನ ಮುಖಾಂತರ

ಕರೆ ಮಾಡಿ ಜಮೀನಿನ ಮೇಲೆ ಸಾಲ ತೆಗೆಯಲಿಕ್ಕೆ ಪೋಡಿ ಮಾಡುವುದು ಅವಶ್ಯಕತೆ ಇರುವುದರಿಂದ ಪುನಃ ಮನವಿ ಮಾಡಿದೆ. ಆರೋಪಿ ತನಗೆ ಲಂಚದ ಹಣ ಕೊಡಲಿಲ್ಲ ಮತ್ತು ಅವರು ಕೇಳಿದ ಹಣವನ್ನು ಸರಿ ಮಾಡಲಿಲ್ಲ ಅಂತಾ ಪೋನನಲ್ಲಿ ತಿಳಿಸಿದರು.

4. ನಾನು ಮತ್ತು ಚಾಸಾ-4 ರವರು ಚರ್ಚೆ ಮಾಡಿ ಆರೋಪಿ ಲಂಚದ ಹಣ ಕೇಳಿದ ಸಂಭಾಷಣೆಯ ವಿವರದೊಂದಿಗೆ ಹಾವೇರಿಯ ಲೋಕಾಯುಕ್ತ ಕಛೇರಿಗೆ ಬಂದು ದೂರು ಕೊಟ್ಟಿರುತ್ತೇನೆ. ದೂರು ನೋಡುತ್ತಿದ್ದು, ಅದನ್ನು ನಿಪಿ-1, ಸಾಕ್ಷಿ ಸಹಿ ನಿಪಿ-1(ಎ) ಅಂತಾ ಗುರುತಿಸಲಾಯಿತು. ನಿಪಿ-1 ನ್ನು ನಾನೇ ಬರೆದಿರುತ್ತೇನೆ.

5. ನನ್ನ ಪೋನಿನಲ್ಲಿದ್ದ ಆರೋಪಿ ಜೊತೆ ಮಾತನಾಡಿದ ಸಂಭಾಷಣೆಯನ್ನು ಲ್ಯಾಪಟ್ಯಾಪ ಸಹಾಯದಿಂದ ಸಿಡಿಗೆ ವರ್ಗಾವಣೆ ಮಾಡಿ ಕೇಳಿಸಲಾಯಿತು. ಸದರಿ ಸಂಭಾಷಣೆಯ ವಿವರವನ್ನು ಕೇಳಿದರೆ ಗುರುತಿಸುತ್ತೇನೆ. ಇಬ್ಬರು ಪಂಚರ ಸಮಕ್ಷಮ ಸಂಭಾಷಣೆಯ ವಿವರವನ್ನು ವಹಿಸುವಿಕೆ ಪಂಚನಾಮೆಯಲ್ಲಿ ಮಧ್ಯಾಹ್ನ 12-30 ರಿಂದ 2-00 ರವರೆಗೆ ತಯಾರಿಸಲಾಯಿತು.

6. ನಾನು ರೂ.2,000/- ಮುಖಬೆಲೆಯ 2 ನೋಟುಗಳು ಮತ್ತು ರೂ.500/- ಮುಖಬೆಲೆಯ 2 ನೋಟುಗಳನ್ನು ಒಟ್ಟಿಗೆ ರೂ.5,000/-ಗಳನ್ನು ತನಿಖಾಧಿಕಾರಿ ಮುಂದೆ ಹಾಜರುಪಡಿಸಿರುತ್ತೇನೆ. ಸದರಿ ನೋಟುಗಳ ಮೇಲೆ ತನಿಖಾಧಿಕಾರಿ ಪಿನಾಫ್ತಲಿನ್ ಪೌಡರ ಸವರಿದರು. ನನ್ನ ಮಾವನ ಶರ್ಟಿನ ಜೇಬಿನಲ್ಲಿ ರೂ.200/- ಮತ್ತು ಒಂದು ಮೊಬೈಲ್ ಇತ್ತು.

7. ಪಿನಾಫ್ತಲಿನ್ ಪುಡಿ ಸವರಿದ್ದ ನೋಟುಗಳನ್ನು ನನ್ನ ಶರ್ಟನ ಜೇಬಿನಲ್ಲಿರಿಸಿದರು. ಕೈಗಳ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಯಿತು. ಸದರಿ ದ್ರಾವಣ ಸ್ಯಾಂಪಲ್ ಪಡೆದ ಬಗ್ಗೆ ಪಂಚನಾಮೆಯಲ್ಲಿ ಬರೆದು ತಯಾರಿಸಲಾಯಿತು. ವಹಿಸುವಿಕೆ ಪಂಚನಾಮೆಯನ್ನು ನಿಪಿ-2 ಅಂತಾ, 6 ನೇ ಪುಟದಲ್ಲಿರುವ ಸಾಕ್ಷಿ ಸಹಿ ನಿಪಿ-2(ಎ) ಅಂತಾ ಗುರುತಿಸಲಾಯಿತು.

8. ಸೋಡಿಯಂ ಕಾರ್ಬೋನೇಟ್ ದ್ರಾವಣದ ಸ್ವಲ್ಪ ಭಾಗವನ್ನು ಮಾದರಿಗಾರಿ ತಗೆದಿದ್ದು ಅದನ್ನು ತನಿಖಾಧಿಕಾರಿ ಜಪ್ತಿಮಾಡಿದ್ದು ಹಾಜರುಪಡಿಸಿದ್ದು, ಆ ದ್ರಾವಣವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮುಮಾ-1 ಅಂತಾ ಗುರುತಿಸಲಾಯಿತು. ಗುಲಾಬಿ ಬಣ್ಣಕ್ಕೆ ಬದಲಾದ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುಮಾ-2 ಅಂತಾ ಗುರುತಿಸಲಾಯಿತು.

(ತನಿಖಾಧಿಕಾರಿ ಸೀಲು ಮಾಡಿದ ಸಿಡಿ ಹಾಜರುಪಡಿಸಿದ್ದು, ಅದನ್ನು ಮಾನ್ಯ ವಿಸಆ ಮತ್ತು ಆರೋಪಿ ಸಮಕ್ಷಮ ಸೀಲು ಓಪನ್ ಮಾಡಿ ಲೋಕಾಯುಕ್ತ ಕಛೇರಿಯಿಂದ ತಂದ ಲ್ಯಾಪಟ್ಯಾಪ ಮುಖಾಂತರ ಪ್ಲೇ ಮಾಡಲಾಯಿತು.)

9. ಸಾಕ್ಷಿ ತನ್ನ ಮತ್ತು ಆರೋಪಿಯ ಧ್ವನಿ ಸಂಭಾಷಣೆಯನ್ನು ಕೇಳಿ ಗುರುತಿಸಿದ್ದು ಇರುತ್ತದೆ. ಸದರಿ ಸಿಡಿಯನ್ನು ನಿಪಿ-3 ಅಂತಾ ಗುರುತಿಸಲಾಯಿತು.

10. ಅದೇ ದಿನ ಖಾಸಗಿ ಮತ್ತು ಸರಕಾರಿ ವಾಹನ, ದ್ವಿಚಕ್ರ ವಾಹನದಲ್ಲಿ ನಾನು, ಚಾಸಾ-4, ಪಂಚರು ಮತ್ತು ಲೋಕಾಯುಕ್ತ ಪೊಲೀಸರು ಹಾನಗಲ್ಲಗೆ ಆರೋಪಿ ಬರಲು ತಿಳಿಸಿದ ಸೂಚನೆ ಮೇರೆಗೆ ಹೋದೆವು. ಆರೋಪಿ ತಿಳುವಳ್ಳಿಗೆ ಹೋಗಿದ್ದೇನೆ, ನಂತರ ದಾವಣಗೆರೆಗೆ ಹೋಗಿ ಮರುದಿನ ಬರುತ್ತೇನೆ ಅಂತಾ ಹೇಳಿದ ಬಗ್ಗೆ ವಾಪಾಸು ನಾವು ಹಾವೇರಿಯ ಲೋಕಾಯುಕ್ತ ಪೊಲೀಸ ಠಾಣೆಗೆ ಬಂದೆವು. ಅಲ್ಲಿ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-4, ಸಾಕ್ಷಿ ಸಹಿ ನಿಪಿ-4(ಎ) ಅಂತಾ ಗುರುತಿಸಲಾಯಿತು. ಸದರಿ ಲೋಕಾಯುಕ್ತ ಕಛೇರಿಯಲ್ಲಿ ಹಣ ಮತ್ತು ವಸ್ತುಗಳನ್ನು ಅಲ್ಮೇರಾದಲ್ಲಿ ಇಡಲಾಯಿತು.

11. ದಿನಾಂಕಃ05/06/2018 ರಂದು ಬೆಳಿಗ್ಗೆ 6-45 ಕ್ಕೆ ಲೋಕಾಯುಕ್ತ ಕಛೇರಿಗೆ ಮರಳಿ ಬಂದು ಅಲ್ಲಿ ಒಂದು ಪುನಃ ಪಂಚನಾಮೆ ಮಾಡಿ ನಂತರ ಆರೋಪಿ ಸಂಗೂರ ಬಸ್ಸು ನಿಲ್ದಾಣಕ್ಕೆ ಬರಲು ತಿಳಿಸಿದ್ದರ ಮೇರೆಗೆ ನಾವು ಸಂಗೂರ ಬಸ್ಸು ನಿಲ್ದಾಣಕ್ಕೆ ಬಂದೆವು. ನಾನು ಮತ್ತು ಚಾಸಾ-4 ರವರು ಸಂಗೂರ ಬಸ್ಸು ನಿಲ್ದಾಣದ ಹತ್ತಿರ ಬಂದೆವು. ಲೋಕಾಯುಕ್ತ ಪೊಲೀಸರು ಬೇರೆ ಬೇರೆ ಕಡೆಗೆ ವಾಹನಗಳನ್ನು ನಿಲ್ಲಿಸಿದ್ದರು.

12. ನಮ್ಮ ಮಾವನ ಜೇಬಿನಲ್ಲಿ ಸೋನಿ ವಾಯ್ಸ ರೆಕಾರ್ಡರನ್ನು ಇಟ್ಟಿದ್ದರು. ಚಾಸಾ-4 ರವರ ಜೊತೆ ಚಾಸಾ-2 ರವರನ್ನು ಆರೋಪಿ ಜೊತೆ ಸಂಭಾಷಣೆ ಮಾಡಲು ಲೋಕಾಯುಕ್ತ ಪೊಲೀಸರು ಕಳಿಸಿಕೊಟ್ಟರು. ಆರೋಪಿಯು ದೇವಿಹೊಸೂರು-ಡಿಸಿ ಕಛೇರಿ ರಸ್ತೆಯ ಮೇಲೆ ರಾಘವೇಂದ್ರ ಬೇಕರಿ ಪಕ್ಕ ಬರಲು ತಿಳಿಸಿದ್ದು, ಅಲ್ಲಿ ಚಾಸಾ-4 ಮತ್ತು ಚಾಸಾ-2 ರವರು ಆರೋಪಿಯನ್ನು ಭೇಟಿ ಮಾಡಿ ರೂ.5,000/-ಗಳನ್ನು ಚಾಸಾ-4 ನನ್ನ ಪರವಾಗಿ ಆರೋಪಿಗೆ ಕೊಟ್ಟಿರುತ್ತಾರೆ.

13. ಆರೋಪಿಯು ಚಾಸಾ-4 ರವರಿಂದ ರೂ.5,000/- ಹಣ ಪಡೆದು ಬಲಜೇಬಿನ ಒಳಗೆ ಇಟ್ಟುಕೊಂಡರು. ಚಾಸಾ-4 ರವರು ಟವೆಲ್ಲು ತೆಗೆದುಕೊಂಡು ಮುಖ ಒರೆಸಿಕೊಳ್ಳುವ ಸಂಜ್ಞೆ ಮಾಡಿದ ನಂತರ ಲೋಕಾಯುಕ್ತ ಪೊಲೀಸರು ಮತ್ತು ಸಿಬ್ಬಂದಿ ಸ್ಥಳಕ್ಕೆ ಬಂದು ಆರೋಪಿಯನ್ನು ಹಿಡಿದುಕೊಂಡು

ಲೋಕಾಯುಕ್ತ ಪೊಲೀಸರ ವಾಹನದಲ್ಲಿದ್ದ ದ್ರಾವಣ ಮತ್ತು ಇತರೇ ಉಪಕರಣಗಳನ್ನು ತಂದು ಆರೋಪಿಯ ಕೈತೊಳೆದಾಗ ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು.

14. ಅಲ್ಲಿ ಪೊಲೀಸರು ಸ್ಯಾಂಪಲ್ ಗಾಗಿ ದ್ರಾವಣವನ್ನು ಬಾಟಲನಲ್ಲಿ ಶೇಖರಿಸಿ ಸೀಲು ಮಾಡಿ ಜಪ್ತಿಮಾಡಿದರು. ಆ ದ್ರಾವಣವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮುಮಾ-3 ಅಂತಾ ಗುರುತಿಸಲಾಯಿತು. ಆರೋಪಿಯ ಕೈ ಅದ್ದಿದ ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆ ಯಾಗಿದ್ದು, ಆ ದ್ರಾವಣವನ್ನು ಕೂಡ ಬಾಟಲನಲ್ಲಿ ಶೇಖರಿಸಿ ಸೀಲು ಮಾಡಿ ಜಪ್ತಿಮಾಡಿದರು. ಆ ದ್ರಾವಣವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮುಮಾ-4 ಅಂತಾ ಗುರುತಿಸಲಾಯಿತು.

15. ಸಂಗೂರಿನ ಗ್ರಾಮ ಪಂಚಾಯ್ತಿಯಲ್ಲಿ ಆರೋಪಿಯನ್ನು ಕರೆದುಕೊಂಡು ಹೋಗಿ ಅಲ್ಲಿ ಆರೋಪಿಗೆ ಲುಂಗಿ ವ್ಯವಸ್ಥೆ ಮಾಡಿ ಆತನ ಪ್ಯಾಂಟನ್ನು ತೆಗೆದುಕೊಂಡು ಅದರಲ್ಲಿದ್ದ ರೂ.5,000/- ಹಣವನ್ನು ತೆಗೆದು ಜಪ್ತಿಮಾಡಲಾಯಿತು. ಆರೋಪಿಯ ಕೈಯನ್ನು ಪುನಃ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಯಿತು. ಆ ದ್ರಾವಣವನ್ನು ಕೂಡ ಬಾಟಲನಲ್ಲಿ ಶೇಖರಿಸಿ ಸೀಲು ಮಾಡಿ ಜಪ್ತಿಮಾಡಿದರು. ಆ ದ್ರಾವಣವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮುಮಾ-5 ಅಂತಾ ಗುರುತಿಸಲಾಯಿತು.

16. ಮೇಲೆ ಹೇಳಿದ ರೂ.5,000/- ಹಣವನ್ನು ನೋಡಿದರೆ ಗುರುತಿಸುತ್ತೇನೆ ಅಂತಾ ಸಾಕ್ಷಿ ಹೇಳುತ್ತಾರೆ. ಅಲ್ಲಿ ಸ್ಥಳದಲ್ಲಿಯೇ ಪಂಚನಾಮೆ ಮಾಡಿರುತ್ತಾರೆ. ಆರೋಪಿಯ ಪ್ಯಾಂಟನ್ನು ವಶಕ್ಕೆ ಪಡೆದು ಕವರನಲ್ಲಿ ಹಾಕಿ ಜಪ್ತಿಮಾಡಿದರು.

(ತನಿಖಾಧಿಕಾರಿ ಸೀಲು ಮಾಡಿದ ಪ್ಯಾಂಟನ್ನು ಹಾಜರುಪಡಿಸಿದ್ದು, ಅದನ್ನು ಮಾನ್ಯ ವಿಸಅ ಮತ್ತು ಆರೋಪಿ ಸಮಕ್ಷಮ ಸೀಲು ಓಪನ್ ಮಾಡಲಾಯಿತು.)

17. ಸಾಕ್ಷಿ ಪ್ಯಾಂಟನ್ನು ನೋಡಿ ಗುರುತಿಸಿದ್ದು, ಅದನ್ನು ಮುಮಾ-6 ಅಂತಾ ಗುರುತಿಸಲಾಯಿತು. ನೋಟುಗಳ ನಂಬರು ಮತ್ತು ವಿವರಗಳನ್ನು ಬರೆದು ಕವರನಲ್ಲಿ ಹಾಕಿ ಜಪ್ತಿ ಮಾಡಲಾಯಿತು. ಆರೋಪಿಯ ಭೂದಾಖಲೆಗಳು, ಪೆನ್ಸಿಲ್, ರಬ್ಬರು ಮತ್ತು ಇತರೇ ವಸ್ತುಗಳಿದ್ದವು.

18. ಚಾಸಾ-4 ಮತ್ತು ಆರೋಪಿಯ ನಡುವೆ ನಡೆದ ಸಂಭಾಷಣೆಯ ವಿವರವನ್ನು ಲ್ಯಾಪಟ್ಯಾಪ ಮುಖಾಂತರ ಹಾಕಿ ಸಿಡಿಗೆ ವರ್ಗಾವಣೆ ಮಾಡಿ ಕೇಳಿಸಲಾಯಿತು.

(ತನಿಖಾಧಿಕಾರಿ ಸೀಲು ಮಾಡಿದ ಸಿಡಿ ಹಾಜರುಪಡಿಸಿದ್ದು, ಅದನ್ನು ಮಾನ್ಯ ವಿಸಅ ಮತ್ತು ಆರೋಪಿ ಸಮಕ್ಷಮ ಸೀಲು ಓಪನ್ ಮಾಡಿ ಲೋಕಾಯುಕ್ತ ಕಛೇರಿಯಿಂದ ತಂದ ಲ್ಯಾಪಟ್ಯಾಪ ಮುಖಾಂತರ ಪ್ಲೇ ಮಾಡಲಾಯಿತು.)

19. ಸಾಕ್ಷಿ ಚಾಸಾ-4 ಮತ್ತು ಆರೋಪಿಯ ಧ್ವನಿ ಸಂಭಾಷಣೆಯನ್ನು ಕೇಳಿ ಗುರುತಿಸಿದ್ದು ಇರುತ್ತದೆ. ಸದರಿ ಸಿಡಿಯನ್ನು ನಿಪಿ-5 ಅಂತಾ ಗುರುತಿಸಲಾಯಿತು.

20. ನನ್ನ ಮತ್ತು ಆರೋಪಿಯ ನಡುವೆ ನಡೆದ ಸಂಭಾಷಣೆಯ ವಿವರವನ್ನು ಲ್ಯಾಪಟ್ಯಾಪ ಮುಖಾಂತರ ಹಾಕಿ ಸಿಡಿಗೆ ವರ್ಗಾವಣೆ ಮಾಡಿ ಕೇಳಿಸಲಾಯಿತು.

(ತನಿಖಾಧಿಕಾರಿ ಸೀಲು ಮಾಡಿದ ಸಿಡಿ ಹಾಜರುಪಡಿಸಿದ್ದು, ಅದನ್ನು ಮಾನ್ಯ ವಿಸಅ ಮತ್ತು ಆರೋಪಿ ಸಮಕ್ಷಮ ಸೀಲು ಓಪನ್ ಮಾಡಿ ಲೋಕಾಯುಕ್ತ ಕಛೇರಿಯಿಂದ ತಂದ ಲ್ಯಾಪಟ್ಯಾಪ ಮುಖಾಂತರ ಪ್ಲೇ ಮಾಡಲಾಯಿತು.)

21. ಸಾಕ್ಷಿ ತನ್ನ ಮತ್ತು ಆರೋಪಿಯ ಧ್ವನಿ ಸಂಭಾಷಣೆಯನ್ನು ಕೇಳಿ ಗುರುತಿಸಿದ್ದು ಇರುತ್ತದೆ. ಸದರಿ ಸಿಡಿಯನ್ನು ನಿಪಿ-6 ಅಂತಾ ಗುರುತಿಸಲಾಯಿತು. ಸದರಿ ಎಲ್ಲ ವಿವರವನ್ನು ಟ್ರ್ಯಾಪ ಪಂಚನಾಮೆಯಲ್ಲಿ ಬರೆದು ತಯಾರಿಸಲಾಯಿತು. ನಂತರ ಆರೋಪಿಯ ಮೇಲಾಧಿಕಾರಿಗಳಿಗೆ ಘಟನೆಯ ವಿಷಯವನ್ನು ತಿಳಿಸಿ ಕರೆಸಲಾಯಿತು. ಅವರಿಗೂ ಕೂಡ ನನ್ನ, ಚಾಸಾ-4 ಮತ್ತು ಆರೋಪಿ ನಡುವೆ ಆದ ಸಂಭಾಷಣೆಯ ವಿವರಗಳನ್ನು ಹಾಕಿ ಕೇಳಿಸಾಯಿತು.

22. ಆರೋಪಿಗೆ ಲೋಕಾಯುಕ್ತ ಪೊಲೀಸರು ಹೇಳಿಕೆ ಕೊಡಲು ತಿಳಿಸಿರುತ್ತಾರೆ. ಆರೋಪಿಯು ಹೇಳಿಕೆ ಕೊಟ್ಟರು. ಆರೋಪಿ ನನ್ನ ಜೊತೆ ಒಂದು ವ್ಯವಹಾರ ಮಾಡಿದ್ದೆ, ಈ ರೀತಿ ಟ್ರ್ಯಾಪ ಮಾಡಿ ನನ್ನನ್ನು ಹಿಡಿಸಿರುತ್ತಾರೆ ಅಂತಾ ಆರೋಪಿ ತಿಳಿಸಿರುತ್ತಾರೆ. ಚಾಸಾ-2 ರವರು ಆರೋಪಿಯ ವಿವರ ಹೇಳಿಕೆಯನ್ನು ಒಪ್ಪಿರುವುದಿಲ್ಲ.

23. ಸದರಿ ಎಲ್ಲ ವಿಷಯವನ್ನು ಪಂಚನಾಮೆಯಲ್ಲಿ ಬರೆದು ನಮೂದಿಸಲಾಯಿತು. ಟ್ರ್ಯಾಪ ಪಂಚನಾಮೆಗೆ ನನ್ನ ಸಹಿಯನ್ನು ಎಲ್ಲ ಪುಟಕ್ಕೆ ಪಡೆದಿರುತ್ತಾರೆ. ಟ್ರ್ಯಾಪ ಪಂಚನಾಮೆ ದಿನಾಂಕಃ05/06/2018 ರಂದು ಮಾಡಿದ್ದು, ಅದನ್ನು ನಿಪಿ-7 ಅಂತಾ, ಕೊನೆ ಪುಟದಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-7(ಎ) ಅಂತಾ ಗುರುತಿಸಲಾಯಿತು. ಪಂಚನಾಮೆ ಮಾಡಿದ ಬಗ್ಗ ಪೋಟೋ ಕೂಡ ತೆಗೆದುಕೊಳ್ಳಲಾಯಿತು.

(ಮಾನ್ಯ ವಿಸಅ ರವರು ಬಣ್ಣದ ಪೋಟೋಗಳನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ಆರೋಪಿಯು ಬಣ್ಣದ ಪೋಟೋಗಳು, ಸಿ.ಡಿ., ಪೆನಡ್ರೈವ ಅಥವಾ ನೆಗೆಟಿವ್‌ಗಳನ್ನು ಹಾಜರುಪಡಿಸದೇ ಇರವುದರಿಂದ ಅವುಗಳನ್ನು ಗುರುತಿಸಲು ತಕರಾರು ಎತ್ತಿರುತ್ತಾರೆ. ಬಣ್ಣದ ಪೋಟೋಗಳು ಪ್ರಾಥಮಿಕ ಸಾಕ್ಷ್ಯ ಆಗುವುದಿಲ್ಲ. ತನಿಖಾಧಿಕಾರಿ ಬಣ್ಣದ ಪೋಟೋಗಳ ಪೂರಕವಾಗಿ ಸಿ.ಡಿ., ಪೆನಡ್ರೈವ ಮತ್ತು ನೆಗೆಟಿವ್ ಮತ್ತು ಕಲಂ-65(ಬಿ) ಸಾಕ್ಷ್ಯ ಅಧಿನಿಯಮ ಅಡಿಯಲ್ಲಿ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ. ಆದ್ದರಿಂದ ಅವುಗಳನ್ನು ಗುರುತಿಸಬೇಕೆಂಬ ಮಾನ್ಯ ವಿಸಅ ರವರ ಮನವಿಯನ್ನು ತಳ್ಳಿಹಾಕಲಾಯಿತು.)

6. ಘಟನೆ ಬಗ್ಗೆ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆರೋಪಿ ಕಡೆಯಿಂದ ಜಪ್ತಿ ಮಾಡಿದ ರೂ.5,000/- ಹಣವನ್ನು ನೋಡಿದರೆ ಗುರುತಿಸುತ್ತೇನೆ.

(ಹೆಚ್ಚಿನ ಮುಖ್ಯ ವಿಚಾರಣೆಗೆ ಮಾನ್ಯ ವಿಸಅ ರವರ ಕೋರಿಕೆ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.